# ನಕ್ಕುಬಿಡಿ



ಇಂಗ್ಲಿಷ್ ಪದ ಬಳಕೆ ಮಾಡಬೇಡಿ ಅಂತ ಹೇಳಿದ್ದಲ್ಲ ನಿಮಗೆ. ನೋಡಿ ನಿಮ್ಮ ಭಾಷಣ ಕೇಳೋದಕ್ಕೆ ಜನ ಯಾರೂ ಇಲ್ಲ.!

**ಡಾಕ್ಟರ್:** ನೋಡಪ್ಪ, ಆರೋಗ್ಯವಾಗಿ ಇರಬೇಕು ಅಂದ್ರೆ ಪ್ರತಿದಿನ ನೀನು ಕನಿಷ್ಠ ಹತ್ತು ಕಿ.ಮೀ. ನಡೆಯಲೇಬೇಕು. ಹಾಗೆ ಮಾಡಿದ್ರೆ ನಿನಗೆ ಯಾವ ಕಾಯಿಲೆಯೂ ಬರೋದಿಲ್ಲ. ಬೇಕಾದ್ರೆ ಒಂದು ವರ್ಷ ಬಿಟ್ಟು ನನಗೆ ಫೋನ್ ಮಾಡಿ ತಿಳಿಸಿದ್ರೆ ಸಾಕು. ಗುಡ್ ಲಕ್!

**ಗುಂಡ:** ಆಯ್ತು ಡಾಕ್ಟ್ರೇ, ಖಂಡಿತ ನೀವು ಹೇಳಿದ ಹಾಗೇ ಮಾಡ್ತೀನಿ!

(ಹೇಳಿದ ಹಾಗೆಯೇ ಸರಿಯಾಗಿ ಒಂದು ವರ್ಷದ ನಂತರ ಗುಂಡ ಡಾಕ್ಟರ್‌ಗೆ ಫೋನ್ ಮಾಡಿದ)

**ಗುಂಡ:** ನೀವು ಹೇಳಿದ ಹಾಗೆಯೇ ದಿನಕ್ಕೆ ಹತ್ತು ಮೈಲಿ ನಡೀತಾ, ನಡೀತಾ, ಇವತ್ತು ಅಫ್ಘಾನಿಸ್ತಾನಕ್ಕೆ ಬಂದು ಬಿಟ್ಟಿದ್ದೀನಿ! ಆದರೆ ಇಲ್ಲಿ ಬಹಳ ಜೋರಾಗಿ ಯುದ್ಧ ನಡೀತಾ ಇದೆ. ಏನ್ ಮಾಡ್ಲಿ ವಾಪಸ್ ಬಂದು ಬಿಡಲಾ ಹೇಗೆ ಡಾಕ್ಟ್ರೇ!

***

**ಗುಂಡ:** ಲೇ ಸುಬ್ಬಿ ಇಲ್ ನೋಡೇ. ಗ್ರಾಚುಟಿ ಹಣ ಬಂದಿದೆ. ನೀನು ಯಾವಾಗ್ಲೂ ಕೇಳ್ತಾ ಇರ್ತೀಯಲ್ಲ, ಅದಕ್ಕೆ ನಿನಗೆ ಒಂದು ಚಿನ್ನದ ಕರಿಮಣಿ ಸರ ಮಾಡೋಕ್ಕೆ ಆಚಾರಿ ಅಂಗಡಿಗೆ ಹೋಗಿ ಆರ್ಡರ್ ಕೊಟ್ಟು ಬರ್ತೀನಿ!

**ಸುಬ್ಬಿ:** ಓಹ್ .. ಅಂತೂ ನಿಮ್ಗೂ ಒಳ್ಳೆ ಬುದ್ಧಿ ಬಂತಲ್ಲಾ, ಹೋಗ್ಲಿ ಬಿಡಿ. ಆಚಾರಿಗೆ ಸ್ವಲ್ಪ ಭದ್ರವಾಗಿ ಮಾಡಿಕೊಡೋಕೆ ಹೇಳಿ. ಕಡೆ ಪಕ್ಷ ನೀವು ಇರೋವಷ್ಟು ದಿನವಾದರೂ ಬಾಳಿಕೆ ಬರಲಿ!

***

**ಸುಬ್ಬಿ:** ಇಲ್ ಕೇಳಿದ್ರಾ? ಪಕ್ಕದ ಮನೆ ಪದ್ಮಾಳ ಮಗ ಪೆದ್ದು ನೂರಕ್ಕೆ 99 ಮಾರ್ಕ್ಸ್ ತಗೊಂಡು ಪಾಸ್ ಆದನಂತೆ, ಆದ್ರೆ ನೂರಕ್ಕೆ ಇನ್ನೊಂದೇ ಒಂದು ಮಾರ್ಕ್ಸ್ ಮಿಸ್ ಆಗಿ ಬಿಟ್ಟಿತಂತೆ! ಛೇ... ಪಾಪ ಅಲ್ವೇನ್ರಿ?

**ಗುಂಡ:** ಅಯ್ಯೋ ಸುಬ್ಬಿ, ಆ ಪದ್ದು ಬಿಟ್ಟಿದ್ದು ಬರೀ ಒಂದು ಮಾರ್ಕ್ಸ್. ನಿನ್ನ ಸುಪುತ್ರ 99 ಮಾರ್ಕ್ಸ್ ಬಿಟ್ಟು ಬರೀ ಒಂದು ಮಾರ್ಕ್ಸ್ ತಗೊಂಡು ಬಂದಿದಾನೆ. ಬಾ ಇಲ್ಲಿ ನೋಡು!

***

ಗುಂಡ ಮನೆಗೆ ಬಂದಾಗ ಸುಬ್ಬಿ ತಿಂಗಳ ಲೆಕ್ಕ ಒಪ್ಪಿಸಿದಳು. ಗುಂಡ ಓದಿದ ಅದು ಹೀಗಿತ್ತು: ಹಾಲಿನವನಿಗೆ ₹650, ಗ್ಯಾಸ್ ಸಿಲಿಂಡರ್ ₹875, ಪೇಪರ್ ₹250, ತರಕಾರಿ ₹585 ಇತ್ಯಾದಿ ಕೊನೆಯಲ್ಲಿ 'ತಲೆ'ಗೆ ₹750 ಅಂತ ಬರೆದಿತ್ತು. ಅದನ್ನು ನೋಡಿ ಆಶ್ಚರ್ಯ ಆಯ್ತು!

**ಗುಂಡ:** ಲೇ ಇದೇನೇ. ತಲೆಗೆ ₹750 ಅಂತ ಬರೆದಿದ್ದಿ? ಯಾರ ತಲೆ, ಏನ್ ಕಥೆ?

**ಸುಬ್ಬಿ:** ಅಯ್ಯೋ ಅದಾ? ತಲೆ ಅಂದ್ರೆ 'ತ'ಪ್ಪಾದ'ಲೆ'ಕ್ಕ!

***

**ಸುಬ್ಬಿ:** ರೀ, ಪಕ್ಕದ ಮನೆಗೆ ಬಂದಿರೋ ಗಂಡ ಹೆಂಡತಿ ಮೂರು ಹೊತ್ತೂ ಸರಸ ಆಡೋದು ಕಿಟಕಿ ಇಂದಾ ಕಾಣ್ಸುತ್ತೆ, ಥೂ ಅಸಹ್ಯ ಕಣ್ರೀ!

**ಗುಂಡ:** ಏನೇ ನೀನು ಹೇಳ್ತಿರೋದು? ಪಕ್ಕದ್ ಮನೆ ಕಿಟಕಿನಲ್ಲಾ? ಅವ್ರ ಮನೆ ಕಿಟಕಿ ನಮ್ಮ ಮನೆಗಿಂತ ದೂರ ಇದೆಯಲ್ಲೇ?

**ಸುಬ್ಬಿ:** ಅಯ್ಯೋ, ನಮ್ಮ ಮನೆ ಕಿಟಕಿ ಕಣ್ರೀ! ಇಲ್ಲಿ ಬಂದು ಈ ದುರ್ಬೀನ್‌ನಲ್ಲಿ ನೋಡಿ ಬೇಕಾದ್ರೆ!

***

**ಸುಬ್ಬಿ:** ರೀ, ಕೇಳಿದ್ರಾ ಸುದ್ದಿ? ನಿಮ್ಮ ಸ್ನೇಹಿತ ಸುಬ್ಬನ ಹೆಂಡತಿ ನಿನ್ನೆ ರಾತ್ರಿ ಎಲ್ಲಿಗೋ ಓಡಿ ಹೋದಳಂತೆ! ಏನ್ ಕಾಲ ಬಂತಪ್ಪ?

**ಗುಂಡ:** ಹೋ, ಅಷ್ಟೇನಾ? ಸದ್ಯ ನೀನು ಇಲ್ಲೇ ಇದ್ದೀಯಲ್ಲ! ಯಾರ ಹೆಂಡತಿ ಎಲ್ಲಾದ್ರೂ ಹೋಗಲಿ ನನ್ ಹೆಂಡತಿ ಮಾತ್ರ ನನ್ ಮನೇಲಿ ಇರಲಿ ಅಂತ ಗಾದೆ ಕೇಳಿಲ್ವೇನೆ?

***

**ಗುಂಡ:** (ಮನೆಗೆ ಬಂದವನೇ) ಲೇ ಸುಬ್ಬಿ, ಹೊಟ್ಟೆ ತುಂಬಾ ಹಸೀತಾ ಇದೆ ಬೇಗ ಏನಿದೆ ಅದನ್ನೇ ಬಡಿಸು ಬಾರೇ!

**ಸುಬ್ಬಿ:** ಹ್ಞಾ, ಮನೆ ಎದುರುಗಡೆ ಒಣ ಹುಲ್ಲು ಪೇರಿಸಿ ಇಟ್ಟಿದ್ದಾರಲ್ಲಾ ಹೋಗಿ ತಿಂದು ಬನ್ನಿ!

**ಗುಂಡ:** ಏಯ್, ಯಾಕೆ ನಾಲಿಗೆ ಉದ್ದ ಆಗ್ತಾ ಇದೆ. ನನ್ನ ಏನು ಅಂತ ತಿಳಿದು ಕೊಂಡಿದ್ದೀಯಾ?

**ಸುಬ್ಬಿ:** ಅದು ಹಾಗಲ್ಲ ಕಣ್ರೀ. ನಿಮ್ಮ ಅಮ್ಮ ಆಗಾಗ ಹೇಳ್ತಾ ಇದ್ರು, 'ನನ್ನ ಮಗ ಏನ್ ಮಾಡಿ ಹಾಕಿದ್ರೂ ದನ ತಿಂದ ಹಾಗೆ ತಿಂತಾನೆ' ಅಂತ. ಅದಕ್ಕೆ ಹಾಗಂದೆ!

ಸಂಗ್ರಹ: ಆರ್. ವೀರೇಶ್ ಕುಮಾರ್, ಬೆಂಗಳೂರು


